ಈ) ಉದ್ದೇಶಿಸಿದಲ್ಲಿ ಯೋಜನೆ ಯಾವ ಹಂತದಲ್ಲಿ ಈ ಎಲ್ಲಾ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡ ಇದೆಯೇ ಇಲ್ಲದಿದ್ದಲ್ಲಿ ಕಾರಣವೇನು (ವಿವರ ನೀಡುವುದು)?

ಡಾ॥ ಹೆಚ್. ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಜಿಲ್ಲೆಯಲಲಿ 11 ಪ್ರಾಥಮಿಕ ಆರೋಗ್ಯ ಘಟಕಗಳಿವೆ.

	ಉಡುಪಿ	ಕುಂದಾಪುರ	ಕಾರ್ಕಳ
ಪ್ರಾ.ಆ.ಕೇಂದ್ರ	22	18	11
ಪ್ರಾ.ಆ ಘಟಕ	–	5	4
ಸಂಚಾರಿ ಘಟಕ	2	–	2
ಸ,ಆ.ಕೇ	2	–	–
ಸಾ, ಆಸ್ಪತ್ರೆ	–	1	1
ಈಲಾಆಸ್ಪತ್ರೆ	1	–	–

ಆ) ಕಾರ್ಕಳ ತಾಲ್ಲೂಕಿನಲ್ಲಿ 4 ಪ್ರಾಥಮಿಕ ಆರೊಗ್ಯ ಘಟಕ ಹಾಗೂ 11 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ.

ಹೊಸದಾಗಿ ಯಾವುದು ಮಂಜೂರಾಗಿರುವುದಿಲ್ಲ ಹಾಗೂ ಯಾವುದೇ ಹೊಸ ಸ್ಥಳಗಳನ್ನು ಮಂಜೂರಾತಿಗಾಗಿ ಗುರುತಿಸಿರುವುದಿಲ್ಲ.

ಸಧ್ಯದಲ್ಲಿ ಯಾವ ಪ್ರಾ.ಆ.ಘಟಕವನ್ನೂ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ

ಇ) ಇಲ್ಲ.

ಈ) ಅನ್ವಯಿಸುವುದಿಲ್ಲ

ಪ್ರಾಥಮಿಕ ಆರೋಗ್ಯ ಕೇಂದ್ರ ಈಡು ಹೊರತುಪಡಿಸಿ, ಉಳಿದ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕಟ್ಟಡಗಳು ಇರುತ್ತವೆ. ಮುಂಬರುವ ನಬಾರ್ಡ್ (ಆರ್. ಐ. ಡಿ.ಎಫ್.) 11 ರ ಯೋಜನೆಯಲ್ಲಿ ಈಡು ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಕ್ಕೆ ಪ್ರಸ್ತಾಪಿಸಲಾಗಿದೆ.

3824 (4354) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) ಮಾನ್ಯ ಡಾ॥ ಹೆಚ್. ಸಿ. ಮಹದೇವಪ್ಪ (ಗ್ರಾಮೀಣಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ) ಗ್ರಾಮ ಪಂಚಾಯ್ತಿಗಳಿಗೆ 2003–04, 2004 05ರಲ್ಲಿ ನಿಗದಿಪಡಿಸಿದ ಹಣ ಎಷ್ಟು? ಬಿಡುಗಡೆ ಮಾಡಿದ ಹಣವೆಷ್ಟು? ಹಾಗೂ ಖರ್ಚಾದ ಹಣವೆಷ್ಟು ವರ್ಷಗಳವಾರು ವಿವರ ನೀಡುವುದು;

ಆ) ರಾಜ್ಯದ ಎಲ್ಲಾ ಗ್ರಾಮ ಪಂಚಾಯ್ತಿಗಳಿಗೂ ಸಮನಾಗಿ ಬಿಡುಗಡೆಯಾಗಿರುವುದೇ ಅಥವಾ ಅದರಲ್ಲಿ ವ್ಯತ್ಯಾಸವಿದೆಯೇ(ಕಳೆದ 2 ವರ್ಷಗಳ ವಿವರ ನೀಡುವುದು)?

ಸಿ. ಮಹದೇವಪ್ಪ (ಗ್ರಾಮೀಣಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ಪ್ರತಿ ಗ್ರಾಮ ಪಂಚಾಯತಿಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾತಿದೆ.

ವರ್ಷ	ನಿಗಧಿಪಡಿಸಿದ ಶಾಸನಬದ್ದ ಅನುದಾನ ಮೊತ್ತ (ರೂ. ಲಕ್ಷಗಳಲ್ಲಿ)	ಬಿಡುಗಡೆಯಾದ ಶಾಸನಬ್ದ್ ಅನುದಾನ ಮೊತ್ತ 9ರೂ. ಲಕ್ಷಗಳಲ್ಲಿ)
2003–04	5.00	5.00
2004–05	5.00	5.00
2005–06	5.00	1.25 (ಮೊದಲನೆ ತೈಮಾಸಿಕ ಅನುದಾನ)

ಆ) ಶಾಸನಬದ್ದ ಅನುದಾನವನ್ನು ಎಲ್ಲಾ ಗ್ರಾಮ ಪಂಚಾಯತಿಗಳಿಗೂ ಸಮನಾಗಿ ಹಂಚಲಾಗುವುದಿಲ್ಲ.

3826(4356) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) ಮಾನ್ಯ ಶ್ರೀ ಡಿ. ಮಂಜನಾಥ (ಉನ್ನತ ಶಿಕ್ಷಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ)1974 ರಿಂದ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಅರ್ಹರನ್ನು ಖಾಯಂಗೊಳಿಸಿರುವುದು ನಿಜವೇ;

ಆ) ಖಾಯಂ ಗೊಳಿಸಿದವರ ಸಂಖ್ಯೆ ಎಷ್ಟು ಯಾವಾಗಿನಿಂದ ಖಾಯಂಗೊಳಿಸಲಾಗಿದೆ. ಖಾಯಂಗೆ ಅನುಸರಿದ ಮಾನದಂಡಗಳೇನು. ಮಾರ್ಗಸೂಚಿಗಳೇನು, ಈ ಪೈಕಿ ಎಷ್ಟು ಜನ ಅಭ್ಯರ್ಥಿಗಳು ಯುಜಿಸಿ ಅರ್ಹತಾ ಪರೀಕ್ಷೆ ಪಾಸು ಮಾಡಿದ್ದರು;

ಇ) ಈ ಉಪನ್ಯಾಸಕರುಗಳಿಗೆ ವಿಧಿಸಿದ್ದ ಗಡುವು (ಅವಧಿ)ಯಾವಾಗ ಮುಗಿಯುತ್ತದೆ. ನಂತರ ಇವರ ಸ್ಥಿತಿ ಬಗ್ಗೆ ಸರ್ಕಾರ ಯಾವ ನಿರ್ಧಾರ ಕೈಗೊಳ್ಳುವುದು ಇವರುಗಳಿಗೆ ಯುಜಿಸಿ ಅರ್ಹತಾ ಪರೀಕ್ಷೆಯಿಂದ ವಿನಾಯ್ತಿ ನೀಡುವ ವಿಚಾರ ಸರ್ಕಾರದ ಮುಂದಿದೆಯೇ;